# ನಾರಾಯಣ ಎನ್ನಿರೊ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 93.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 321.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 298.
4. **Note:** The lyrics given without highlights are as per Ref. 2. The lyrics as per Ref. 3 are same as in Ref. 2. But the lyrics are different as per Ref. 1 and are given separately in yellow highlights.
5. **Note:** Singer has followed lyrics in Ref. 2.

| | |
|---|---|
| ರಾಗ ಕಮಾಚ್ ಅಟ್ಟ ತಾಳ | ರಾಗ ಕಲ್ಯಾಣಿ ಅಟ್ಟ ತಾಳ |
| | |
| ನಾರಾಯಣ ಎನ್ನಿರೋ | ನಾರಾಯಣ ಎನ್ನಿರೋ ಶ್ರೀ ನರಹರಿ |
| ಶ್ರೀ ನರಹರಿ ಪಾರಾಯಣ ಮಾಡಿರೋ ‖ ಪ ‖ | ನಾರಾಯಣ ಎನ್ನಿರೋ |
| | |
| ನಾರಾಯಣನೆಂದು ಅಜಮಿಳನು ಕೈವಲ್ಯ | ನಾರಾಯಣನೆಂದು ಅಜಮಿಳ ಕೈವಲ್ಯ |
| ಸೇರಿದನೆಂಬೊ ಸುದ್ದಿಯ ಕೇಳಿ ಅರಿಯಿರಾ ‖ ಅಪ ‖ | ಸೂರೆಗೊಂಡನೆಂಬ ಸುದ್ದಿಯನರಿಯಿರಾ |
| | |
| ಕಾಶಿಗೆ ಹೋಗಲೇಕೆ ಕಾವಡಿ ಪೊತ್ತು | ಚೋರರ ಭಯವಿಲ್ಲವೊ ಇದಕೆ ನೋಡ್ಡೈ |
| ಬೇಸತ್ತು ತಿರುಗಲೇಕೆ | ದಾರರಂಜಿಕೆ ಇಲ್ಲವೊ |
| ವಾಸುದೇವನ ನಾಮ ಬಾಯ್ತುಂಬ ನೆನೆದರೆ | ಊರನಾಳುವ ದೊರೆಯ ಭೀತಿ ಇನಿತಿಲ್ಲವೊ |
| ಕ್ಲೇಶಗಳೆಂಬುದು ಲೇಶ ಮಾತ್ರವಿಲ್ಲದೆ ‖ ೧ ‖ | ಘೊರ ಪಾತಕವೆಲ್ಲ ಹಾರಬಿಡುವುದಿದು |
| | |
| ಚೋರರ ಭಯವಿಲ್ಲವೊ ಹರಿ ನಾಮಕ್ಕೆ | ಕಾಶಿಗೆ ಹೋಗಲೇಕೆ ಕಾವಡಿ ಹೊತ್ತು |
| ಯಾರ ಅಂಕೆಯಿಲ್ಲವೊ | ಬೇಸತ್ತು ತಿರುಗಲೇಕೆ |
| ಊರನಾಳುವ ದೊರೆ ನೀತಿ ಭೀತಿಗಳಿಲ್ಲ | ವಾಸುದೇವನ ನಾಮ ವರ್ಣಿಸಿದವರಿಗೆ |
| ಘೊರ ಪಾತಕವೆಲ್ಲ ದೂರ ಮಾಡುವುದಕ್ಕೆ ‖ ೨ ‖ | ಕ್ಲೇಶವೆಂಬುವುದಿದು ಲೇಶ ಮಾತ್ರವು ಇಲ್ಲ |
| | |
| ಸ್ನಾನವ ಮಾಡಲೇಕೆ ಮಾನವರಿಗೆ | ಸ್ನಾನವ ಮಾಡಲೇಕೆ ಸಂಧ್ಯಾವಂದನೆ |
| ಮೌನ ಮಂತ್ರಗಳೇಕೆ | ಮೌನ ಮಂತ್ರಗಳೇತಕೆ |
| ದೀನಪಾಲಕ ನಮ್ಮ ಬೆಟ್ಟದೊಡೆಯನ್ನ | ದೀನ ರಕ್ಷಕ ಬೆಟ್ಟದೊಡೆಯನಾದವನ |
| ಧ್ಯಾನಕೆ ಸರಿಯುಂಟೆ ಪುರಂದರ ವಿಠಲನ ‖ ೩ ‖ | ಧ್ಯಾನಕೆ ಸಮವುಂಟೆ ಪುರಂದರ ವಿಠಲನ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಅಜಮಿಳ –** ಅಜಾಮಿಳ; ಕಾನ್ಯ ಕುಬ್ಜದ ಬ್ರಾಹ್ಮಣ. ದುರಾಚಾರಿಯಾಗಿದ್ದು ಸಾಯುವ ಗಳಿಗೆಯಲ್ಲಿ ತನ್ನ ಮಗನಾದ ನಾರಾಯಣನನ್ನು ಕರೆದ; ನಾರಾಯಣನೆಂಬ ಹೆಸರನ್ನು ಹೇಳಿದುದೇ ಅವನ ಸದ್ಗತಿಗೆ ಕಾರಣವಾಯಿತು.

**ಕಾವಡಿ –** ಅಡ್ಡೆ.

**Classification:** Keerthane
**Ankita:** purandara vittala
**Location:** Tirupati
**Category:** Jeevanoddhara, Aartha Bhava
**Sub-Category:** Vishnu, Narayana, narasimha, ajamila, vaikunta, kashi, Krishna, kalla, ooru, raja, bhava, snana, mantra, Dhyana, dina,
**Pravachana:** NA
**Explanation:** NA